ಅಣ್ಣನ ಮಗನಿಗೆ ಅಂದರೆ ನನ್ನ ತಂದೆಗೆ ತನ್ನ ಭಾವನ ಮಗಳನ್ನು ಅಂದರೆ ನನ್ನ ತಾಯಿಯನ್ನು ಮದುವೆ ಮಾಡಿಸಿ, ಆ ಕುಟುಂಬದಲ್ಲಿ ಹಿರಿತನಕ್ಕೆ ಉಳಿದಳು.

ಆಂಟಿ ಅನಕ್ಷರಸ್ಥೆಯಾಗಿದ್ದಳು. ರೂಢಿಗತವಾಗಿ ತಾಯಿಯಿಂದ ಮಕ್ಕಳಿಗೆ ಅನೂಚಾನವಾಗಿ ಪ್ರಾಪ್ತಿಯಾಗುವಂತಹ ಧಾರ್ಮಿಕ ಮತ್ತು ಸಾಂಸಾರಿಕ ಆಚರಣೆ ಮತ್ತು ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿದ್ದಳು. ಹೀಗಾಗಿ ನನ್ನ ಬಾಲ್ಯದ ಧಾರ್ಮಿಕ ಸಂಸ್ಕಾರಗಳನ್ನು ನೀಡುವ ಜವಾಬುದಾರಿಯನ್ನು ಆಕೆ ತನ್ನದಾಗಿಸಿಕೊಂಡು ನನ್ನ ಎಲ್ಲಾ ಕಷ್ಟ ಕೋಟಲೆ ಕೀಟಲೆಗಳನ್ನು ಸಹಿಸಿಕೊಂಡು ಅವಳು ನನಗೆ ಶಿಕ್ಷಣವನ್ನು ನೀಡಲಾರಂಭಿಸಿದಳು. ಅದು ಮೊದಲಿಗೆ ಪ್ರಶ್ನೋತ್ತರ ರೂಪವಾಗಿ ಇರುತ್ತಿತ್ತು.

**ಆಂಟಿ:** ನಿನ್ನ ನಾಮಧೇಯವೇನು?

**ನಾನು:** ನನ್ನ ನಾಮಧೇಯ ಸಯ್ಯದ ಖುಷ್ತರ ಬಾನು.

**ಆಂಟಿ:** ನಿನ್ನ ಧರ್ಮ ಯಾವುದು?

**ನಾನು:** ಇಸ್ಲಾಮ್ ನನ್ನ ಧರ್ಮ.

**ಆಂಟಿ:** ತಾವು ಯಾರ ಅನುಯಾಯಿ?

**ನಾನು:** ಹಜರತ್ ಮೊಹಮ್ಮದ್ ಪೈಗಂಬರ್‌ರವರ ಅನುಯಾಯಿ.

ಹೀಗೆ ಅದು ಮುಂದುವರೆಯುತ್ತಿತ್ತು. ನನ್ನ ಹೆಸರಿನ ಬಗ್ಗೆ ಬಹು ದೊಡ್ಡ ಗೊಂದಲವೇರ್ಪಟ್ಟಿತ್ತು. ನಾನು ಹುಟ್ಟಿದಾಗ ಸ್ವತಃ ಆಂಟಿಯೇ ನನ್ನ ಹೆಸರನ್ನು ಸಯ್ಯದಾ ಖುಷ್ತರ ಬಾನು ಎಂದು ಇಟ್ಟಿದ್ದಳು. ನನ್ನ ತಾಯಿ ಸಯ್ಯದ್ ಮೂಲದವರು, ಅಂದರೆ ಪ್ರವಾದಿಯವರ ವಂಶದೊಂದಿಗೆ ಸಂಬಂಧ ಹೊಂದಿದವರು. ನನ್ನ ತಂದೆ ಶೇಕ್ ವಂಶದವರು. ಹೀಗಾಗಿ ಸಂಪ್ರದಾಯದ ರೀತ್ಯಾ ನನ್ನ ಹೆಸರು ಶೇಖಾ (ಶೇಕ್‌ನ ಸ್ತ್ರೀಲಿಂಗ) ಎಂದು ಆರಂಭವಾಗಬೇಕಿತ್ತು. ಆದರೆ, ಆಂಟಿಗೆ ನಾನು ಉನ್ನತ ಕುಲದ ಗುರುತನ್ನು ಹೊಂದಬೇಕೆಂಬ ಬಯಕೆ ಇದ್ದುದರಿಂದ ನನ್ನನ್ನು ಯಾವುದೇ ಮುಲಾಜಿಲ್ಲದೆ, ಸಯ್ಯದಾ ಎಂದು ಕರೆದು ನನ್ನ ಉನ್ನತ ಕುಲದ ಮೂಲವನ್ನು ಬೀಬಿಯ (ನನ್ನ ತಾಯಿಯ) ವಂಶದೊಂದಿಗೆ ಲಗತ್ತಿಸಿಬಿಟ್ಟಳು.

ಆದರೆ ಸಮಸ್ಯೆ ಉಂಟಾದದ್ದು ನನ್ನ ಖುಷ್ತರಾ ಎಂಬ ಹೆಸರಿನ ದೆಸೆಯಿಂದ. ನನ್ನ ಹಿಂದೂ ಗೆಳತಿಯರಿಗೆ ಈ ಹೆಸರನ್ನು ಸರಿಯಾಗಿ ಉಚ್ಚರಿಸಲು ಬರುತ್ತಿರಲಿಲ್ಲ ಮತ್ತು



ಚಿತ್ರ: ಪ್ರಜಾವಾಣಿ ಆರ್ಕೈವ್ಸ್

ಅಂದಿನ ವಯೋಸಹಜ ಕುಚೇಷ್ಟೆಗಳಿಗೆ ಅನುಗುಣವಾಗಿ ಕುಸ್ತರ, ಖುಸ್ತರ ಎಂದೆಲ್ಲಾ ಅಣಕಿಸಿ 'ಕುಸ್ತಿ' ಎಂದು ಅಡ್ಡ ಹೆಸರನ್ನು ಇಟ್ಟುಬಿಟ್ಟರು ಮತ್ತು ಸಲೀಸಾಗಿ 'ಕುಸ್ತಿ ಬಾನು' ಎಂದು ಕರೆಯಲಾರಂಭಿಸಿದರು. ನನ್ನ ಹೆಸರಿನ ಅಪಭ್ರಂಶದಿಂದ ನನಗೆ ಅಪಾರ ನೋವಾಗುತ್ತಿತ್ತು. ಆದರೆ, ಏನು ಮಾಡಬೇಕೆಂದು ನನಗೆ ತಿಳಿಯುತ್ತಿರಲಿಲ್ಲ. ನಾನು ನನ್ನದೇ ಕ್ರಮದ ಮೂಲಕ ಅವರನ್ನು ತಿದ್ದಲು ಪ್ರಯತ್ನಿಸಿ, ವಿಫಲಳಾಗಿ ಉಪಾಧ್ಯಾಯಿನಿಗೆ ಈ ಬಗ್ಗೆ ದೂರು ಸಲ್ಲಿಸಿ ಕೊನೆಗೆ ಏನೂ ಪ್ರಯೋಜನ ಆಗದೆ ಯಥಾಪ್ರಕಾರ ನನ್ನ ತಂದೆಯ ಬಳಿ ಸಂಕಷ್ಟವನ್ನು ಹೇಳಿಕೊಂಡೆ. ಮಗುವಿನ ಏನೋ ಒಂದು ತಕರಾರು ಎಂದು ನನ್ನ ತಂದೆ ನಿರ್ಲಕ್ಷ್ಯ ಮಾಡಲಿಲ್ಲ. ಬದಲಿಗೆ ಶಾಲೆಗೆ ಬಂದು ಸಂಬಂಧಪಟ್ಟವರನ್ನು ಸಂಪರ್ಕಿಸಿ ನನ್ನ ಹೆಸರಿನ ಮೊದಲ ಭಾಗವಾದ ಸಯ್ಯದಾ ಖುಷ್ತರ ಎಂಬುದನ್ನು ಇನಿಷಿಯಲ್ ಆಗಿ ಪರಿವರ್ತಿಸಿ ಎಸ್.ಕೆ. ಬಾನು ಎಂದು ಹೆಸರು ಬರೆಸಿದರು. ಆ ನಂತರ ನನ್ನ ಹೆಸರಿನ ವಿರೂಪ ಮತ್ತು ಅಪಹಾಸ್ಯ ತಪ್ಪಿತು. ಇದು ನನ್ನೊಬ್ಬಳ ಸಮಸ್ಯೆ ಎಂದು ಪರಿಗಣಿಸಿ ನಾನಂತು ಸುಲಭ ಪರಿಹಾರವನ್ನು ಕಂಡುಕೊಂಡೆ. ನಂತರ ನನ್ನ ಬೆನ್ನಿಗೆ ಬಿದ್ದ ನನ್ನ ತಮ್ಮ ತಂಗಿಯರಿಗೆ ಕೂಡ ನನ್ನ ಅನುಭವದ ಹಿನ್ನೆಲೆಯಲ್ಲಿ ಸರಳವಾಗಿ ಎಲ್ಲರೂ ಉಚ್ಚರಿಸಬಹುದಾದ ಹೆಸರುಗಳನ್ನು ಇಟ್ಟರು. ಮತ್ತು ಇದೇ ಸಂಪ್ರದಾಯ ನಮ್ಮ ಕುಟುಂಬದಲ್ಲಿ ಮುಂದುವರಿಯಿತು. ●